ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

31

ಇಲಾಖೆ / ವಿಷಯ : DEPARTMENT / SUBJECT: ಗಡಿ ವಿವಾದ - (ಬೆಳಗಾವಿ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 23/1/21

# ಶಿವಸೇನೆ ಪುಂಡಾಟಕ್ಕೆ ಕನ್ನಡಿಗರ ಆಕ್ರೋಶ

■ **ವಿಕ ಸುದ್ದಿಲೋಕ** ಬೆಳಗಾವಿ 23.1.21

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ವಿವಾದಾತ್ಮಕ ಹೇಳಿಕೆ ಹಾಗೂ ಗಡಿಯಲ್ಲಿ ಶಿವಸೇನೆ ಪುಂಡಾಟಿಕೆ ಖಂಡಿಸಿ ಶುಕ್ರವಾರ ಕರ್ನಾಟಕ ರಕ್ಷಣಾ ವೇದಿಕೆ ಯುವ ಸೇನೆ (ಹರೀಶಗೌಡ ಬಣ) ಕಾರ್ಯಕರ್ತರು ನಗರದ ಚನ್ನಮ್ಮ ವೃತ್ತದಲ್ಲಿ ಪ್ರತಿಭಟಿಸಿದರು.

ಕರವೇ ಯುವಸೇನೆ ರಾಜ್ಯಾಧ್ಯಕ್ಷ ಹರೀಶ್ ಗೌಡ ನೇತೃತ್ವದಲ್ಲಿ ಬೆಂಗಳೂರಿನಿಂದ 100ಕ್ಕೂ ಅಧಿಕ ಕಾರ್ಯಕರ್ತರು ಶುಕ್ರವಾರ ಬೆಳಗ್ಗೆ ಬೆಳಗಾವಿ ಕಡೆಗೆ ಆಗಮಿಸುತ್ತಿದ್ದರು. ಈ ವೇಳೆ ಅವರನ್ನು ಹಿರೇಬಾಗೇವಾಡಿ ಟೋಲ್ ಹತ್ತಿರ ಪೊಲೀಸರು ತಡೆದರು. ಆದರೆ, ಅವರು ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆಗೆ ಅವಕಾಶ ನೀಡುವಂತೆ ಪಟ್ಟು ಹಿಡಿದರು. ಪೊಲೀಸರ ಭದ್ರತೆಯಲ್ಲಿ ಚನ್ನಮ್ಮ ವೃತ್ತಕ್ಕೆ ಬಂದು ಪ್ರತಿಭಟಿಸಿದರು. ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ವಿರುದ್ಧ ಘೋಷಣೆ ಕೂಗಿದರಲ್ಲದೇ, ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು.

ಶಿವಸೇನೆ ಪುಂಡಾಟ ಮಾಡಿದ ಗಡಿ ಗ್ರಾಮ ಶಿನ್ನೊಳ್ಳಿ ಕಡೆಗೆ ತೆರಳಲು ಪ್ರತಿಭಟನೆಕಾರರು ಮುಂದಾದಾಗ, ಪೊಲೀಸರು ಕರವೇ ಕಾರ್ಯಕರ್ತರನ್ನು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಕರವೇ ಮುಖಂಡರು ಮಾತನಾಡಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿವಾದಾತ್ಮಕ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಗಡಿ ಭಾಗದ ಒಂದಿಂಚೂ ಪ್ರದೇಶವನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದರು.



ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿಕೆ ಖಂಡಿಸಿ ಕರವೇ ಯುವ ಸೇನೆ ಕಾರ್ಯಕರ್ತರು ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

## ಎಂಇಎಸ್ [illegible]ಸ್ತಿನಲ್ಲಿಡಿ

**ಹುಬ್ಬಳ್ಳಿ:** ನಾಡು ನುಡಿಗೆ ದ್ರೋಹ ಬಗೆಯುವ ಎಂಇಎಸ್‌ಗೆ ಹೋರಾಟ ಮಾಡಲು ಅನುಮತಿ ನೀಡಬಾರದು. ನಾಡದ್ರೋಹಿಗಳ ವಿರುದ್ಧ ರಾಜ್ಯ ಸರಕಾರ ಉಗ್ರ ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಆಗ್ರಹಿಸಿದ್ದಾರೆ.



ಮುಖ್ಯಮಂತ್ರಿಗೆ ಹೊರಟ್ಟಿ ಪತ್ರ

ಈ ಕುರಿತು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಹೊರಟ್ಟಿ, ''ದೇಶದ್ರೋಹಿ ಕೆಲಸ ಮಾಡುತ್ತಿರುವ ಅವರೆಲ್ಲರನ್ನು ಜೈಲಿಗೆ ಹಾಕಬೇಕು ಅಥವಾ ಗಡಿಪಾರು ಮಾಡಬೇಕು. ಬೆಳಗಾವಿ ಮಹಾನಗರ ಪಾಲಿಕೆ ಮುಂದೆ ಹಾರಿಸಿರುವ ಕನ್ನಡ ಧ್ವಜವನ್ನು ಎಂಇಎಸ್ ತೆಗೆದು ಹಾಕುವ ಉದ್ದೇಶದಿಂದ ಅಶಾಂತಿ ವಾತಾವರಣ ನಿರ್ಮಿಸುತ್ತಿದೆ,'' ಎಂದು ಕಿಡಿಕಾರಿದ್ದಾರೆ.

''ಕರ್ನಾಟಕದ ಅನ್ನ ಉಂಡು, ನೀರು ಕುಡಿದು ಇಲ್ಲಿ ಮಹಾರಾಷ್ಟ್ರದ ಧ್ವಜ ಹಾರಿಸಲು ಪ್ರಯತ್ನಿಸುವ ಎಂಇಎಸ್ ಅನ್ನು ಹದ್ದುಬಸ್ತಿನಲ್ಲಿಡಲು ಸರಕಾರಕ್ಕೆ ಏಕೆ ಆಗುತ್ತಿಲ್ಲ. ಮಹಾರಾಷ್ಟ್ರದಲ್ಲಿ ಕನ್ನಡ ಧ್ವಜ ಹಾರಿಸಿದರೆ ಅವರು ಸುಮ್ಮನಿರುತ್ತಾರೆಯೆ? ಅಂತಹ ಪುಂಡಾಟಿಕೆ ನಡೆಸುತ್ತಿರುವ ಎಂಇಎಸ್‌ಗೆ ರಾಜ್ಯ ಪೊಲೀಸರು ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಸಹ ಹೆದರುತ್ತಾರೆಯೆ,'' ಎಂದು ಪ್ರಶ್ನಿಸಿದ್ದಾರೆ. ''ಕನ್ನಡ ಧ್ವಜಕ್ಕೆ ತಕರಾರು ತೆಗೆದ ಎಂಇಎಸ್ ಹತ್ತಿಕ್ಕಬೇಕು. ಈ ವಿಚಾರದಲ್ಲಿ ಸರಕಾರ ಹೇಡಿ ಆಗಬಾರದು. ಇಂಥ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕು,'' ಎಂದು ಹೊರಟ್ಟಿ ಆಗ್ರಹಿಸಿದ್ದಾರೆ.